ಏನು ನಡೆದಿದೆ ಎಂಬುದು ಗೊತ್ತಾಯಿತು. ‘ಇದಕ್ಕೆ ಅಧ್ಯಕ್ಷರು ಒಪ್ಪಿದರೆ?’ ಎಂದು ಕೇಳಿದೆ. ಅವನು ‘ಒಪ್ಪುತ್ತಿರಲಿಲ್ಲ; ನಾನೇ ಅವರಿಗೆ ಸರ್ ಎಲ್ಲರ ಭಾಷಣ ಬಹಳ ಬೋರ್ ಹೊಡೆಸಿದೆ. ನೀವು ಒಪ್ಪಿದರೆ ನಾನು ಸ್ವಲ್ಪ ತಮಾಷೆಯಾಗಿ ಮಾತನಾಡಿ ಎಲ್ಲರನ್ನು ನಗಿಸುತ್ತೇನೆ. ನಾನು ಹುಡುಗಿಯಾಗಿದ್ದರೆ ಅಂತ ಮಾತನಾಡಲೆ?’ ಅಂದೆ. ಖುಷಿಯಾಗಿ ಒಪ್ಪಿದರು ಎಂದ. ಈಗ ನನಗೆ ಎಲ್ಲವೂ ಸ್ಪಷ್ಟವಾಗಿ, ಅವನು ಮಾಡಿದ ಮೋಸ ಏನೆಂದು ತಿಳಿದು ಕೋಪ ಬಂದಿತ್ತು. ಆದರೆ ಏನೂ ಮಾಡುವ ಹಾಗೆ ಇರದಿದ್ದರಿಂದ ಸುಮ್ಮನಾದೆ.

ಮುಂದಿನ ಅಂತರಶಾಲಾ ಆಶುಭಾಷಣ ಸ್ಪರ್ಧೆಗೆ ಮತ್ತೆ ನಾವಿಬ್ಬರೇ ಹೋದೆವು. ದಾರಿಯಲ್ಲಿ ನನ್ನ ಸ್ನೇಹಿತ ‘ಈ ಸಲ ನನಗೇ ಫಸ್ಟ್ ಪ್ರೈಸ್! ಬೇಕಾದರೆ ಬರೆದು ಇಟ್ಕೋ’ ಅಂದ. ನಾನು ಪೆಚ್ಚಾದದ್ದು ಕಂಡು ‘ಚೆನ್ನಾಗಿ ಮಾತಾಡಿ ಸಮಾಧಾನಕರ ಬಹುಮಾನ ಆದ್ರೂ ತಗೋ, ಸ್ಕೂಲಿನ ಮಾನ ಉಳಿಸು’ ಎಂದು ರೋಫ್ ಹಾಕಿದ. ನಾನು ಖಿನ್ನನಾಗಿ ಸ್ಪರ್ಧೆ ನಡೆಯುವ ಶಾಲೆ ತಲುಪಿದೆ.

ಆಯೋಜಕರಿಗೆ ನಾವು ಬಂದಿರುವುದನ್ನು ತಿಳಿಸಿದಾಗ ಅವರು ಸ್ಪರ್ಧಿಗಳ ಪಟ್ಟಿಯಲ್ಲಿ ಗುರುತು ಹಾಕಿಕೊಂಡು, ನನ್ನ ಸ್ನೇಹಿತನಿಗೆ ‘ಲಕ್ಕಿ ಕಣೋ ನೀನು. ನಿನ್ನದು ಎರಡನೆಯ ಹೆಸರು. ಸಭೆಯಲ್ಲಿ ಬೇಗ ಹೋಗಿ ಕುಳಿತುಕೋ’ ಎಂದು ಹೇಳಿ, ನನ್ನನ್ನು ಮಧ್ಯದಲ್ಲಿ ಕರೆಯುತ್ತೇವೆ ಎಂದರು. ನನ್ನ ಕಿಲಾಡಿ ಸ್ನೇಹಿತ ‘ಸರ್ ನನ್ನ ಹೆಸರು ಬೇಕಾದರೆ ಕೊನೆಗೆ ಹಾಕಿ’ ಎಂದ. ಅವರು ಖುಷಿಯಿಂದ ಕೊನೆಯಲ್ಲಿದ್ದ ಅವರ ಶಾಲೆಯ ವಿದ್ಯಾರ್ಥಿಯ ಹೆಸರಿನೊಂದಿಗೆ ಅದಲುಬದಲು ಮಾಡಿದರು. ಸಭೆಯಲ್ಲಿ ಕುಳಿತಾಗ ನಾನು ಅವನಿಗೆ ‘ಮೊದಲು ಮಾತನಾಡಿದ್ದರೆ ಚೆನ್ನಾಗಿರುತ್ತಿತ್ತು ಅಲ್ವಾ, ಯಾಕೆ ಬಿಟ್ಟುಕೊಟ್ಟೆ’ ಅಂದೆ. ಅದಕ್ಕೆ ಅವನು ‘ನನ್ನ ಮಾತು ಎಲ್ಲರೂ ಬೋರ್ ಆದ ಮೇಲೆ ಆಡಬೇಕು’ ಎಂದು ಕಣ್ಣು ಮಿಟುಕಿಸಿದ.

ಅವನು ಕಣ್ಣು ಮಿಟುಕಿಸಿದ್ದು ನನ್ನ ಕಣ್ಣು ತೆರೆಸಿತು; ನನಗೆ ಜ್ಞಾನೋದಯವಾಯಿತು. ನನ್ನ ಸರದಿ ಬಂದಾಗ ಚೀಟಿ ತೆಗೆದುಕೊಂಡು ಅಧ್ಯಕ್ಷರ ಬಳಿ ಹೋಗಿ ಅವರ ಅಪ್ಪಣೆ ಪಡೆದು, ‘ನನಗೆ ಬಂದಿರುವ ವಿಷಯ ನಾನು ಹುಡುಗಿಯಾಗಿದ್ದರೆ...’ ಎಂದು ಘೋಷಿಸಿದೆ. ಎಲ್ಲರ ‘ಓ...’ ಮಧ್ಯೆ ನನ್ನ ಮಾಧ್ಯಮಿಕ ಶಾಲೆಯ ಗೆಳತಿಯರನ್ನು ನೆನಪಿಸಿಕೊಂಡು, ರ‍್ಯಾಂಕ್ ರಾಣಿ ತರಹ ಜಂಬದಿಂದ ಕತ್ತನ್ನು ಹೇಗೆ ಕೊಂಕಿಸುತ್ತಿದೆ; ಗಾನಕೋಗಿಲೆ ತರಹ ಹಾಡುವ ಮೊದಲು ಮೂಗಿನಲ್ಲೇ ಸಾ ಪಾ ಸಾ ಧ್ವನಿ ಹೇಗೆ ಹೊರಡಿಸುತ್ತಿದ್ದೆ; ಜಗಳಗಂಟಿಯ ತರಹ ‘ಏಯ್... ನಾನ್ಯಾರು ಅನ್ಕೊಂಡಿದ್ದೀಯಾ... ನನಗೆ ಕೋಪ ಬಂದರೆ ಅಷ್ಟೇ...’ ಎಂದು ಹೇಗೆ ಕಿರುಚುತ್ತಿದ್ದೆ; ಹುಡುಗರನ್ನು ಕಂಡರೆ ನಾಚಿ ನೀರಾಗುತ್ತಿದ್ದ ನೆಲಮುಖಿ ನೀರಜಾಳ ನಡಿಗೆ ಹೇಗೆ ಇತ್ತು... ಎಲ್ಲವನ್ನೂ ಅಭಿನಯಿಸಿ ತೋರಿಸಿದೆ. ಕೊನೆಗೆ ‘ನಾನು ಹುಡುಗಿಯಾಗಿದ್ದರೆ ಈ ಸ್ಪರ್ಧೆಗೆ ಬಂದು ‘ನಾನು ಹುಡುಗನಾಗಿದ್ದರೆ...’ ಎಂದು ಮಾತನಾಡುತ್ತಿದ್ದೆ’ ಎಂದು ಹೇಳಿ ಭಾಷಣವನ್ನು ಮುಗಿಸಿದೆ. ಜೋರಾದ ಚಪ್ಪಾಳೆಯ ನಡುವೆ ಬುಸುಗುಡುತ್ತಿದ್ದ ನನ್ನ ಸಹಪಾಠಿಯ ಪಕ್ಕ ಬಂದು ಕುಳಿತೆ.

ಅವನ ಸರದಿ ಬಂದಾಗ ಎಲ್ಲರನ್ನೂ ಬೋರ್ ಹೊಡೆಸುವ ನೀರಸ ಭಾಷಣ ಮಾಡಿ ಬಂದು ಕುಳಿತು ನನ್ನ ಕಡೆ ತಿರುಗಿ ‘ನೀನು ನನಗೆ ಮೋಸ ಮಾಡಿದೆ. ಸ್ನೇಹಿತನಾಗಿ ಹೀಗೆ ಕೈ ಕೊಡ್ತೀಯಾ ಅಂದುಕೊಂಡಿರಲಿಲ್ಲ’ ಎಂದ. ‘ಮೋಸದ ಯೋಜನೆ ನಿನ್ನದು. ಅದನ್ನು ನಾನು ಕಾಪಿ ಮಾಡಿದೆ ಅಷ್ಟೇ’ ಎಂದು ಹೇಳಿ ನಾನು ಸುಮ್ಮನಾದೆ.

ಮೊದಲ ಹಾಗೂ ನಮ್ಮ ಶಾಲೆಗೆ ಬಂದ ಏಕೈಕ ಬಹುಮಾನದೊಂದಿಗೆ ಮನೆಗೆ ಹಿಂದಿರುಗಿ, ನನ್ನ ಸಾಹಸವನ್ನು ಎಲ್ಲರಿಗೂ ಹೇಳಿದೆ. ನಾನು ಮಾಡಿದ ಮೋಸವನ್ನು ನಾನು ಏನು ಮಾತನಾಡಿದೆ ಎನ್ನುವುದು ಮುಚ್ಚಿಹಾಕಿತ್ತು. ಎಲ್ಲರೂ ‘ಭೇಷ್...’ ಎಂದರು. ಆದರೆ ತಂದೆಯವರು ಮಾತ್ರ ಏನು ಹೇಳಲಿಲ್ಲ.

ಮಾರನೆಯ ದಿನ ಬೆಳಗ್ಗೆ ಶಾಲೆಗೆ ತಯಾರಾದ ಮೇಲೆ ತಂದೆಯವರು ಕರೆದದ್ದು ಕೇಳಿ ಅವರ ಓದುವ ಕೋಣೆಗೆ ಹೋದೆ. ನನಗೆ ಶಭಾಷ್‌ಗಿರಿ ಕೊಡಲು ಕರೆಯುತ್ತಿದ್ದಾರೆ ಎಂದು ನನ್ನ ಬಹುಮಾನವನ್ನು ಜೊತೆಗೆ ಒಯ್ದೆ. ಅದನ್ನು ಮೇಜಿನ ಮೇಲೆ ಇಡಲು ಹೇಳಿ, ‘ಅದು ನಿಜವಾಗಿ ನೀನು ಗೆದ್ದ ಬಹುಮಾನವೇ?’ ಎಂದು ಕೇಳಿದರು.

ನಾನು ಚೀಟಿಯಲ್ಲಿ ಬಂದ ವಿಚಾರವಾಗಿ ಮಾತನಾಡದಿದ್ದರೂ ಆ ಕ್ಷಣದಲ್ಲಿ ಮಾಡಿದ ನಿರ್ಧಾರದಿಂದ ಮಾಡಿದ್ದು ಆಶುಭಾಷಣವೇ ಎಂದು ನಡೆದಿದ್ದ ಎಲ್ಲ ವಿಚಾರಗಳನ್ನು ತಿಳಿಸಿದೆ. ಅವರು ‘ಯಾರೋ ಮೋಸ ಮಾಡಿದರು ಎಂದು ನೀನು ಮಾಡಬಾರದು’ ಎಂಬುದನ್ನು ಮನದಟ್ಟು ಮಾಡಿಸಿದರು. ‘ನೀನು ನೀನೇ ಆಗಿರಬೇಕು. ಸ್ವಂತಿಕೆಯಿಂದ, ಸತ್ಯದಿಂದ ಮೋಸವನ್ನು ಗೆಲ್ಲುವ ಛಲ ಬೆಳೆಸಿಕೊಳ್ಳಬೇಕು. ಅಂಥ ಕ್ಷಣಗಳಲ್ಲಿ ಕುಗ್ಗದೆ ಧೈರ್ಯವನ್ನು ತಳೆಯಬೇಕು’ ಎಂದು ಪ್ರೀತಿಯಿಂದ ತಿಳಿಸಿದರು.

ಆಶುಭಾಷಣ ಮಾಡಬೇಕಾದ ವಿಷಯದ ಬಗ್ಗೆ ಮೊದಲ ಆಕರ್ಷಕ ಹೇಳಿಕೆ, ಯೋಚಿಸುತ್ತಾ ಭಾಷಣವನ್ನು ವಿಸ್ತರಿಸುವ ಕಲೆ, ಆ ಸಮಯದಲ್ಲಿ ಹೊಳೆಯುವ ಉತ್ತಮ ಅಂಶದಿಂದ ಭಾಷಣವನ್ನು ಕೊನೆಗೊಳಿಸುವ ಚಾಕಚಕ್ಯತೆಗಳನ್ನು ಮತ್ತೊಮ್ಮೆ ಮನದಟ್ಟು ಮಾಡಿಸಿದರು. ಜೀವನದಲ್ಲಿ ನೆಮ್ಮದಿಯಿಂದ ಇರಬೇಕಾದರೆ ಮೋಸ ಮಾಡದೇ ಇರುವಂತೆ, ಜೊತೆಗೆ ಗೊತ್ತಿದ್ದೂ ತಪ್ಪು ಮಾಡದೇ ಇರುವುದನ್ನು ರೂಢಿಸಿಕೊಳ್ಳುವಂತೆ ದೀಕ್ಷೆ ಕೊಟ್ಟರು.

‘ಶಾಲೆಯಲ್ಲಿ ಉಪಾಧ್ಯಾಯರ ಬಳಿ ಹೋಗಿ ನೀನು ಮಾಡಿರುವ ಈ ಕಾರ್ಯವನ್ನು ನೇರವಾಗಿ ಧೈರ್ಯದಿಂದ ಹೇಳು. ಯಾಕೆ ಹೀಗೆ ಮಾಡಿದೆ ಎಂದೂ ತಿಳಿಸು. ಈ ಕಾರಣಗಳಿಂದ ಮುಂದಿನ ಸ್ಪರ್ಧೆಗೆ ಬೇರೆಯವನನ್ನು ಕಳಿಸಿ ಎಂದು ತಿಳಿಸಿ ಬಿಡು’ ಎಂದು ಹೇಳಿದರು. ನಾನು ಶಾಲೆಯಲ್ಲಿ ಹೋಗಿ ಹಾಗೆಯೇ ಮಾಡಿದೆ. ಮುಂದೆ ಎಂದೂ ಹಾಗೆ ಮಾಡುವುದಿಲ್ಲ ಎಂದು ನನ್ನ ಅಧ್ಯಾಪಕರ ಮುಂದೆ ಪ್ರತಿಜ್ಞೆ ಮಾಡಿದೆ. ನನ್ನ ಮನಸ್ಸು ನಿರಾಳವಾಯಿತು.

ನನ್ನ ಅಧ್ಯಾಪಕರು ಎಲ್ಲಾ ಕಥೆಯನ್ನು ಸಾವಧಾನವಾಗಿ ಕೇಳಿ ಮೂಕವಿಸ್ಮಿತರಾದರು. ‘ನನಗೆ ಕಳೆದ ಬಾರಿಯೇ ಅನುಮಾನ ಬಂದಿತ್ತು. ಎರಡೆರಡು ಬಾರಿ ಅವನನ್ನು ವಿಚಾರಿಸಿದೆ. ಚೀಟಿಯಲ್ಲಿ ‘ನಾನು ಹುಡುಗನಾಗಿದ್ದರೆ...’ ಎಂದು ಇರಲಿಲ್ಲವೇ? ಎಂದು. ಅವನು, ಇಲ್ಲ ಸರ್ ‘ನಾನು ಹುಡುಗಿಯಾಗಿದ್ದರೆ...’ ಎಂದು ಮಾತ್ರ ಇತ್ತು ಎಂದಿದ್ದ.

‘ಅಕಸ್ಮಾತ್ ಅಂಥ ವಿಷಯ ಕೊಟ್ಟಿದ್ದರೆ, ನಾನು ಹುಡುಗಿಯಾಗಿದ್ದರೆ... (ವಿದ್ಯಾರ್ಥಿಗೆ) / ನಾನು ಹುಡುಗನಾಗಿದ್ದರೆ... (ವಿದ್ಯಾರ್ಥಿನಿಗೆ) ಎಂದು ಕೊಡುತ್ತಿದ್ದರು. ಆ ಚೀಟಿ ಹುಡುಗಿಗೆ ಏನಾದರೂ ಸಿಕ್ಕಿದ್ದರೆ?’ ಎಂದು ಹೇಳಿದರು.

‘ನೀನು ನಿಜವನ್ನು ಹೇಳಿ ಒಳ್ಳೆಯದೇ ಮಾಡಿದೆ. ಮುಂದಿನ ಸ್ಪರ್ಧೆಗೆ ಬೇರೆಯವನನ್ನು ಕಳಿಸುತ್ತೇನೆ. ನೀವಿಬ್ಬರೂ ಹೋಗಿಬನ್ನಿ’ ಎಂದು ಹೇಳಿದ್ದರು. ನನ್ನ ಸಹಪಾಠಿ ನನ್ನೊಡನೆ ಮಾತನಾಡುವುದನ್ನು ಬಿಟ್ಟುಬಿಟ್ಟ.

ಮುಂದೆ ಪಿಯುಸಿ ಓದಲು ಕಾಲೇಜಿಗೆ ಸೇರಿದಾಗಲೂ ಚರ್ಚಾಸ್ಪರ್ಧೆಯಲ್ಲಿ ಕಾಲೇಜನ್ನು ಪ್ರತಿನಿಧಿಸಲು ಆಯ್ಕೆಯಾದೆ. ನಿಮಗೆ ಗೊತ್ತಿರುವ ಹಾಗೆ ಆಗ ಒಂದು ವರ್ಷದ ಪ್ರಿ–ಯೂನಿವರ್ಸಿಟಿ ತರಗತಿಗಳು ಡಿಗ್ರಿ ತರಗತಿಗಳೊಡನೆ ಒಂದೇ ಕಾಲೇಜಿನಲ್ಲಿ ಇರುತ್ತಿದ್ದವು. ನನ್ನ ಮೊದಲ ಸ್ಪರ್ಧೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಅಂತರಕಾಲೇಜು ಚರ್ಚಾಸ್ಪರ್ಧೆ. ಅಲ್ಲಿ ನನ್ನ ಸರತಿ ಬಂದಾಗ, ಸಭೆಯ ಅಧ್ಯಕ್ಷರು ‘ಈಗ ವಿಷಯದ ಪರವಾಗಿ ... ಕಾಲೇಜಿನ, ಕುಮಾರಿ... ಅವರು ತಮ್ಮ ವಾದವನ್ನು ಮಂಡಿಸುತ್ತಾರೆ’ ಎಂದು ನನ್ನ ಹೆಸರನ್ನು ಕರೆದರು. ನಾನು ವೇದಿಕೆಯನ್ನು ಹತ್ತುತ್ತಿದ್ದಂತೆಯೇ ಆ ಕಾಲೇಜಿನ ವಿದ್ಯಾರ್ಥಿಗಳು ‘ವಿ ವಾಂಟ್ ಮಿಸ್...!’ ಎಂದು ಕಿರುಚಿದರು. ಅಧ್ಯಕ್ಷರು ನನ್ನನ್ನು ನೋಡಿ ‘ಕ್ಷಮಿಸಿ, ಕುಮಾರಿ ಅಲ್ಲ ಕುಮಾರ...’ ಎಂದು ಮತ್ತೊಮ್ಮೆ ಘೋಷಿಸಿದರು. ಅವರ ಈ ಹೇಳಿಕೆ ಉರಿಯುವ ಬೆಂಕಿಗೆ ತುಪ್ಪವನ್ನು ಹುಯ್ದಂತೆ ಆಯಿತು. ಸಭೆಯಲ್ಲಿದ್ದ ವಿದ್ಯಾರ್ಥಿಗಳು ನನಗೆ ಮಾತನಾಡಲು ಅವಕಾಶವನ್ನೇ ಕೊಡದೆ ನನ್ನನ್ನು ಗೋಳು ಹೊಯ್ದುಕೊಂಡರು. ನಾನು ಅಲ್ಲಿ ನಿಂತಿದ್ದ ನಾಲ್ಕು ನಿಮಿಷಗಳಲ್ಲಿ ಸುಮಾರು ಹತ್ತು ಬಾರಿ ‘ಸನ್ಮಾನ್ಯ ಅಧ್ಯಕ್ಷರೇ...’ ಎಂದು ಮಾತ್ರ ಹೇಳಲು ಸಾಧ್ಯವಾಯಿತು. ನಾನು ವೇದಿಕೆಯಿಂದ ಇಳಿದು ಸೀದಾ ಮನೆಗೆ ಹೋಗಿದ್ದೆ.

ಪ್ರತಿಕ್ರಿಯಿಸಿ: **feedback@sudha.co.in**